# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 12/2015

ಚಾಸಾ-5 ಪ್ರಾಸಾ-6

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ ಪಡೆದುಕೊಳ್ಳಲಾಯಿತು.
ದಿನಾಂಕ: 17-01-2026

| | | |
|---|---|---|
| ಹೆಸರು | : | ನಿಂಗಣ್ಣ ಗೌಡ |
| ತಂದೆಯ ಹೆಸರು | : | ಪರಮನಗೌಡ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ತಾಂಡೂರು ತೆಲಂಗಾಣ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

2011 ರಿಂದ 2013 ರವರೆಗೆ ನಾನು ಆಡಳಿತ ಅಧಿಕಾರಿಯಾಗಿ SRSL ಕಾರ್ಖಾನೆ, ಹವಳಗಾದಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

ನಮ್ಮ ಕಾರ್ಖಾನೆಯವರು ನೀಡಿದ ಅಧಿಕಾರದ ಮೇರೆಗೆ ನಮ್ಮ ಕಚೇರಿಯ ಅಧೀನದಲ್ಲಿ ಕೆಲಸ ಮಾಡುವ 5 ನೇ ಆರೊಪಿ, ಚಾಸಾ 4 ಮತ್ತು ನಾನು ಇಂಡೆಂಟ ಸ್ಲಿಪ ನೀಡುವ ಅಧಿಕಾರ ಹೊಂದಿರುತ್ತೇವೆ ಮತ್ತು ನಮ್ಮಲ್ಲಿ ಯಾರಾದರೂ ಒಬ್ಬರು ಸಹಿ ಮಾಡಿದರೆ ಸಾಕಾಗುತ್ತದೆ. ಅದರಂತೆ ನಮ್ಮ ಕಾರ್ಖಾನೆಯಲ್ಲಿ ಡೀಸೆಲ ದುರ್ಬಳಕೆ ಮಾಡಿಕೊಂಡು ತಮ್ಮ ಸ್ವಂತ ಲಾಭಕ್ಕೆ ಬಳಸಿಕೊಂಡ ಕುರಿತು ದೂರು ಬಂದಿರುತ್ತದೆ. ನಮ್ಮ ಕಾರ್ಖಾನೆಯು ಸುಮಾರು 5 ಪೆಟ್ರೋಲ ಪಂಪಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು ಇರುತ್ತದೆ. ನಾವು ಒಂದು ಇಂಡೆಂಟನಲ್ಲಿ ಸಹಿ ಮಾಡಿ ಅದನ್ನು ಕಂಪ್ಯೂಟರ ಆಪರೇಟರ ಹತ್ತಿರ ಪರಿಶೀಲನೆಗೊಂಡು ನಂತರ ಆಯಾ ಪೆಟ್ರೋಲಪಂಪಗೆ ಕಳುಹಿಸಕೊಡಲಾಗುತ್ತದೆ. ಮತ್ತು ನಮ್ಮ ಕಾರ್ಖಾನೆಯ ಶಾಲಾ ವಾಹನದಲ್ಲಿ ಇಟ್ಟಂತಹ ಇಂಡೆಂತ ಸ್ಲಿಪಗಳು ದುರ್ಬಳಕೆ ಮಾಡಿಕೊಂಡು ಕುರಿತು ಮಾಹಿತಿ ಬಂದಿದರಿಂದ ನಾನು ಪೋಲಿಸರ ಮುಂದೆ

ಒಟ್ಟು 20 ಇಂಡೆಂಟಗಳು ದುರುಪಯೋಗ ಆದ ಕುರಿತು ಮಾಹಿತಿ ನೀಡಿರುತ್ತೇನೆ. ಒಟ್ಟು 2265 ಲೀಟರ ಡೀಸೆಲ ದುರ್ಬಳಕೆ ಮಾಡಿಕೊಂಡಿದ್ದು ಅದರ ಮೌಲ್ಯ ಸುಮಾರು ರೂ. 1,19,051/- ಇರುತ್ತದೆ. ಸದರಿ ಅವ್ಯವಹಾರವು 3 ಪೆಟ್ರೋಲ ಬಂಕಗಳಲ್ಲಿ ನಡೆದಿದ್ದು ಅವುಗಳು ಮಹಾಂತೇಶ ಪೆಟ್ರೋಲ ಏಜೆನ್ಸಿ ಅಫಜಲಪುರದಲ್ಲಿ 1705 ಲೀಟರ, ಭಾಗ್ಯವಂತಿ ಪೆಟ್ರೋಲ ಬಂಕ ಬಗಲೂರುನಲ್ಲಿ 490 ಲೀಟರ ಮತ್ತು ಮಲ್ಲಿಕಾರ್ಜುನ ಪೆಟ್ರೋಲ ಬಂಕ ಬಗಲೂರುನಲ್ಲಿ 70 ಲೀಟರ ಡೀಸೆಲ ದುರ್ಬಳಕೆ ಮಾಡಿಕೊಂಡು ಕಾರ್ಖಾನೆಗೆ ವ್ಯಯ ಮಾಡಿರುತ್ತಾರೆ.

ದಿಃ 03-11-2013 ರಲ್ಲಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ **1** ಮತ್ತು **3** ನೇ ಆರೋಪಿತರ ಪರ ಶ್ರೀ **DBP** ವಕೀಲರಿಂದಃ-

ಒಟ್ಟು 20 ಇಂಡೆಂಟ ಸ್ಲಿಪಗಳು ಇದ್ದವು. ಅವುಗಳನ್ನು ನಾನು ನೋಡಿರುತ್ತೇನೆ. ಅವುಗಳ ಮೇಲೆ ಬೇರೆ ಬೇರೆ ದಿನಾಂಕಗಳು ಇದ್ದವು. ಅವುಗಳು ಈಗ ಹೇಳಲು ಬರುವುದಿಲ್ಲ.

ಪಾಟೀ ಸವಾಲುಃ **5** ನೇ ಆರೋಪಿ ಪರ ಶ್ರೀ **SSP** ವಕೀಲರಿಂದಃ-

ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದಾಗ ನನ್ನ ಸಹಿ ಪಡೆದಿರುವುದಿಲ್ಲ. ಇಂಡೆಂಟಗಳ ಮೇಲೆ ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಿರುತ್ತದೆ. ರಮೇಶ ಮಾಳಗಿ ರವರ ಸಹಿ ನಕಲು ಅಗರುವುದು ತಿಳಿದುಬಂದಿರುತ್ತದೆ. ನಾನು ಕಾರ್ಖಾನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದು ತೋರಿಸಲು ಪೋಲಿಸರು ನನ್ನ ನೇಮಕಾತಿ ಪತ್ರ ಪ್ರತಿ ಪಡೆದಿಲ್ಲ ಎಂದರೆ ಸರಿ ನನ್ನ ಮೇಲಾಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ